ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:1813/2024
ಸಿ.ಡಬ್ಲ್ಯು. 5 ಪಿ.ಡಬ್ಲ್ಯೂ : 2

| | |
|---|---|
| ಸಾಕ್ಷಿದಾರರ ಹೆಸರು | ಗುಣಪಾಲ್ |
| ತಂದೆಯ ಹೆಸರು | ವಾಮನ್ ಕೆ ಪುತ್ರನ್ |
| ವಯಸ್ಸು | 55 ವರ್ಷ |
| ಉದ್ಯೋಗ | ಮೀನುಗಾರಿಕೆ |
| ವಾಸಸ್ಥಳ | ಹೆಜಮಾಡಿ |

ದಿನಾಂಕಃ 19-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಚಾಸಾ 1ರವರ ಪರಿಚಯ ಇದೆ. ಸಾಕ್ಷಿಯವರು ಒಂದು ದಾಖಲೆಯನ್ನು ನೋಡಿ ಅದರಲ್ಲಿ ತಮ್ಮ ಸಹಿ ಇದೆ ಎಂದು ಗುರುತಿಸಿದ್ದು ಸದರಿ ದಾಖಲೆಯು ಸ್ಥಳ ಮತ್ತು ಸ್ವತ್ತು ಸ್ವಾಧೀನ ಪಂಚನಾಮೆಯಾಗಿರುತ್ತದೆ. ಅದನ್ನು ಈಗಾಗಲೇ ನಿಪಿ. 4 ಎಂದು ಗುರುತಿಸಲಾಗಿದ್ದು, ಸಾಕ್ಷಿಯವರ ಸಹಿಯನ್ನು ನಿಪಿ. 4ಬಿ ಎಂದು ಗುರುತಿಸಲಾಯಿತು. ನಿಪಿ 4ಕ್ಕೆ ದಿಃ 31-01-2024ರಂದು ಗಲಾಟೆಯಾದ ಸ್ಥಳ ವಾದ ಅಮಾಸೆ ಕರಿಯದಲ್ಲಿ ಸಹಿ ಮಾಡಿರುತ್ತೇನೆ. ಚಾಸಾ 1ರವರು ಸ್ಥಳ ವನ್ನು ತೋರಿಸಿದರು. ಸ್ಥಳದಿಂದ ಒಂದು ಸಣ್ಣ ಕೋಲನ್ನು ತೆಗೆದುಕೊಂಡು ಹೋದರು. ಆಗ ಸಮಯ ಸುಮಾರು 11.00 ಗಂಟೆಯಾಗಿತ್ತು. ಸಾಕ್ಷಿಯವರು ಒಂದು ಭಾವಚಿತ್ರವನ್ನು ನೋಡಿ ಇದರಲ್ಲಿ ನಾನು ಇರುತ್ತೇನೆ ಎಂದು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ. 2 ಮತ್ತು 3 ಎಂದು ಗುರುತಿಸಲಾಗಿದೆ. ಸಾಕ್ಷಿಯವರು ಕೋಲನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮೂಮಾ 1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿಯವರ ಪರ ಮೇಡಮ್ ಸಿ ಎಸ್ ಎಫ್ ವಕೀಲರಿಂದಃ**

**ಸಿ.ಡಬ್ಲ್ಯು 5 ಪಿ.ಡಬ್ಲೂ : 2**

ನೀವು ಏನು ಕೆಲಸವನ್ನು ಮಾಡುತ್ತೀರಿ ಎಂದರೆ ಮೀನುಗಾರಿಕೆ ಕೆಲಸವನ್ನು ಮಾಡುತ್ತೇನೆ. ನೀವು ಎಲ್ಲಿ ಕೆಲಸವನ್ನು ಮಾಡುತ್ತೀರಿ ಎಂದರೆ ಹೆಜಮಾಡಿಯಲ್ಲಿ ಮಾಡುತ್ತೇನೆ. ಚಾಸ 1 ರಿಂದ 4ರವರು ನಿಮಗೆ ಪರಿಚಯ ಇದ್ದು ಸ್ನೇಹಿತರು ಎಂದರೆ ಹೌದು. ಪೊಲೀಸಿನವರು ನಿಮಗೆ ನೋಟೀಸು ಕೊಟಿಟರುತ್ತಾರೆಯೇ ಎಂದರೆ ಇಲ್ಲ. ನೀವು ಪಡುಬಿದ್ರಿ ಪೊಲೀಸ್ ಠಾಣೆಗೆ ಎಷ್ಟು ಬಾರಿ ಹೋಗಿರುತ್ತೀರ ಎಂದರೆ ಒಮ್ಮೆ ಹೋಗಿರುತ್ತೇನೆ. ನೀವು ಪೊಲೀಸ್ ಠಾಣೆಯಲ್ಲಿಯೇ ಎಲ್ಲಾ ಸಹಿಗಳನ್ನು ಮಾಡಿರುವುದು ಎಂದರೆ ಅಮಾಸೆ ಕರಿಯದಲ್ಲಿ ಮಾಡಿರುತ್ತೇನೆ. ನೀವು ಯಾವ ದಿನದಂದು ಸಹಿ ಮಾಡಿರುವುದು ಎಂದರೆ ದಿಃ 23-03-2023 ರಂದು ಸಹಿ ಮಾಡಿರುತ್ತೇನೆ. ನೀವು ಎಷ್ಟು ಗಂಟೆಯ ಸಮಯದಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಬೆಳಿಗ್ಗೆ 11.00 ರಿಂದ 11.30 ಗಂಟೆಯ ಸಮಯದಲ್ಲಿ ಮಾಡಿರುತ್ತೇನೆ. ನೀವು ಹೇಳುವ ಸ್ಥಳ ದಲ್ಲಿ ಅಂಗಡಿಗಳು ಮತ್ತು ಮನೆಗಳು ಇದ್ದು ತುಂಬಾ ಜನರು ಸೇರಿದ್ದರು ಎಂದರೆ 5-6 ಜನ ಸೇರಿದ್ದರು. ಆ ದಿನ ಬೇರೆ ಯಾರೆಲ್ಲ ಸಹಿ ಹಾಕಿದ್ದಾರೆಂದು ನಿಮಗೆ ಗೊತ್ತಿಲ್ಲ ಎಂದರೆ ಹೌದು.

ನಿಮ್ಮ ಸಮಕ್ಷಮದಲ್ಲಿ ಪೊಲೀಸಿನವರು ಬರೆದಿರುವುದಿಲ್ಲ ಎಂದರೆ ಹೌದು. ನೀವು ಸಹಿ ಮಾಡಿದ ದಾಖಲೆಯಲ್ಲಿ ಏನು ಬರೆದಿತ್ತು ಎಂದು ನಿಮಗೆ ಗೊತ್ತಿಲ್ಲ ಎಂದರೆ ಹೌದು. ನಿಮ್ಮ ಸಮಕ್ಷಮದಲ್ಲಿ ಯಾವುದೇ ವಸ್ತುವನ್ನು ಜಪ್ತುಮಾಡಿಕೊಂಡಿಲ್ಲ ಎಂದರೆ ಕೋಲನ್ನು ಜಪ್ತುಮಾಡಿಕೊಂಡರು. ಘಟನಾ ಸ್ಥಳವು ಸಮುದ್ರದ ಬೀಚಿನ ಹತ್ತಿರ ಇರುವುದರಿಂದ ತುಂಬಾ ಮರಗಳು ಇದ್ದು ಮೂ.ಮಾ 1ರಂತಹ ಕೋಲುಗಳು ಸಾಕಷ್ಟು ಬಿದ್ದಿರುತ್ತದೆ ಎಂದರೆ ಸರಿಯಲ್ಲ. ಮೂ.ಮಾ 1ನ್ನು ಯಾರು ತಂದು ಕೊಟ್ಟರು ಎಂದರೆ ಗೊತ್ತಿಲ್ಲ.

**ಸಿ.ಡಬ್ಲ್ಯು 5 ಪಿ.ಡಬ್ಲ್ಯೂ : 2**

ನಿಪಿ 2 ಮತ್ತು 3 ನ್ನು ಯಾರು ತೆಗೆದರು ಎಂದರೆ ಪೊಲೀಸಿನವರು ಸ್ಥಳದಲ್ಲಿ ತೆಗೆದರು. ನಿಪಿ 2 ಮತ್ತು 3 ನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನಿಮಗೆ ಹೇಳಲು ಆಗುವುದಿಲ್ಲ ಎಂದರೆ ಹೌದು. ನೀವು ಸ್ಥಳ ಕ್ಕೆ ಹೇಗೆ ಹೋಗಿರುತ್ತೀರಿ ಎಂದರೆ ಪೊಲೀಸಿನವರು ಬರುವ ಸುಮಾರು 10 ನಿಮಿಷಕ್ಕೆ ಮೊದಲಿನಿಂದಲೂ ಅಲ್ಲಿಯೇ ಇದ್ದೆವು. ನೀವು ಎಷ್ಟು ಸಮಯ ಅಲ್ಲಿ ಇದ್ದೀರಿ ಎಂದರೆ 12 ಗಂಟೆಯವರೆಗೆ ಇದ್ದೆವು. ಚಾಸಾ 1 ರವರು ಸಹಾಯ ಮಾಡುವಂತೆ ಕೋರಿದ ಕಾರಣದಿಂದ ನೀವು ಬಂದಿರುವುದು ಎಂದರೆ ಸರಿಯಲ್ಲ.

ಚಾಸಾ 1 ರವರ ಮೇಲೆ ಕೇಸು ದಾಖಲು ಆಗಿದ್ದ ವಿಚಾರ ನಿಮಗೆ ತಿಳಿದಿದೆಯೇ ಎಂದರೆ ಗೊತ್ತಿಲ್ಲ. ಚಾಸಾ 1 ಹಾಗೂ ಆರೋಪಿತರಿಗೆ ಮನಸ್ತಾಪ ಇದ್ದ ವಿಚಾರ ನಿಮಗೆ ಗೊತ್ತಿತ್ತು ಎಂದರೆ ಇಲ್ಲ. 2 ನೇ ಆರೋಪಿಯವರು ಕರಾವಳಿ ಪಡೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಹೌದು. ಕರಾವಳಿ ಪ್ರದೇಶದಲ್ಲಿ ಯಾವುದಾದರೂ ಕಾನೂನು ಬಾಹಿರ ಘಟನೆಗಳು ನಡೆಯುತ್ತಿದ್ದಲ್ಲಿ 2 ನೇ ಆರೋಪಿಯವರು ಅವುಗಳ ಬಗ್ಗೆ ಮಾಹಿತಿಯನ್ನು ನಿಯಂತ್ರಣಾಧಿಕಾರಿಯವರಿಗೆ ನೀಡುತ್ತಿದ್ದರು ಎಂದರೆ ಹೌದು. 2 ನೇ ಆರೋಪಿಯವರು ಕರಾವಳಿ ಪ್ರದೇಶದಲ್ಲಿ ನಡೆಯುವ ಕಾನೂನು ಬಾಹಿರ ಕೆಲಸಗಳಿಗೆ ಅಡ್ಡಿಯಾಗುತ್ತಿದ್ದರು ಎಂದರೆ ಸರಿಯಲ್ಲ. ನೀವು ಸಹ ಕಾನೂನು ಬಾಹಿರ ಕೆಲಸದಲ್ಲಿ ತೊಡಗಿಕೊಂಡದ್ದು ನೀವು ಮತ್ತು ಚಾಸಾ1 ರಿಂದ 4 ರವರು ಪಿತೂರಿ ಮಾಡಿ ಸುಳ್ಳು ಕೇಸನ್ನು ಅವರ ವಿರುದ್ಧ ದಾಖಲು ಮಾಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು

**ಸಿ.ಡಬ್ಲ್ಯು 5 ಪಿ.ಡಬ್ಲೂ : 2**

ಘಟನಾ ಸ್ಥಳ ಕ್ಕೆ ಹೋಗಿರುವುದಿಲ್ಲ ಮತ್ತು ಯಾವುದೇ ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಹಾಜರಿಯಲ್ಲಿ ಯಾವುದೇ ವಸ್ತುವನ್ನು ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.